# ಕರ್ನಾಟಕ ಸರ್ಕಾರ
# ಕೈಮಗ್ಗ ಮತ್ತು ಜವಳಿ ಇಲಾಖೆ

## ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ನೇಕಾರರಿಗೆ ಅನುಷ್ಠಾನಗೊಳಿಸುತ್ತಿರುವ ನೇಕಾರರ ಕಲ್ಯಾಣ ಯೋಜನೆಗಳು :-

- **ಮಿತವ್ಯಯ ನಿಧಿ ಯೋಜನೆ :-**

  ಈ ಯೋಜನೆಯಡಿ ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇಕಡ 8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇಕಡ 8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತಕ್ಕೆ ಶೇಕಡ 12 ರ ಬಡ್ಡಿಯನ್ನು ನೀಡಲಾಗುವುದು. ಈ ಯೋಜನೆಯ ಮೊಬಲಗಿನಡಿ ಫಲಾನುಭವಿಗಳ ಮದುವೆ, ಮನೆ ನಿರ್ಮಾಣ, ವೈದ್ಯಕೀಯ ವೆಚ್ಚ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂಗಡವನ್ನು ಪಡೆಯಬಹುದಾಗಿದೆ. ಈ ಹಣವನ್ನು ನೇಕಾರರು 5 ವರ್ಷಗಳ ನಂತರ ಭಾಗಶಃ ಹಿಂಪಡೆಯಬಹುದು ಮತ್ತು 15 ವರ್ಷಗಳ ನಂತರ ಪೂರ್ತಿ ಹಣವನ್ನು ಬಡ್ಡಿ ಸಹಿತ ಹಿಂಪಡೆಯಬಹುದು.

- **ಕೈಮಗ್ಗ ನೇಕಾರರ ರಾಜ್ಯ ಮಟ್ಟದ ಪ್ರಶಸ್ತಿ :-**

  ರಾಜ್ಯದ ಕೈಮಗ್ಗ ನೇಕಾರರ ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಹಾಗೂ ಬೆಂಬಲ ನೀಡಲು ರೇಷ್ಮೆ, ಹತ್ತಿ ಮತ್ತು ಉಣ್ಣೆ ಕೈಮಗ್ಗ ಕ್ಷೇತ್ರ / ವಲಯದಲ್ಲಿ ಕೈಮಗ್ಗ ನೇಕಾರರು ಹೊಂದಿರುವ ನೈಪುಣ್ಯತೆ /ಶ್ರೇಷ್ಠತೆ /ತಾಂತ್ರಿಕತೆ/ಉತ್ಕೃಷ್ಟತೆ ಹೊಂದಿರುವ ಉತ್ಪನ್ನದ ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ ಆಗಸ್ಟ 07 ರಂದು ಆಚರಿಸಲಾಗುವ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು. ಪ್ರತಿ ಕೈಮಗ್ಗ ನೇಕಾರರ ಸನ್ಮಾನಕ್ಕಾಗಿ ರೂ.5,000/- ಗಳನ್ನು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ನಗದು ಬಹುಮಾನಗಳು ಈ ಕೆಳಕಂಡಂತಿದೆ.

**(ರೂ.ಗಳಲ್ಲಿ)**

| **ಕ್ರ.ಸಂ** | **ವಲಯ** | **ನಗದು ಬಹುಮಾನದ ವರ್ಗಗಳು** | |
|---|---|---|---|
| | | **ಪ್ರಥಮ** | **ದ್ವಿತೀಯ** |
| 1 | ರೇಷ್ಮೆ | 25,000/- | 20,000/- |
| 2 | ಹತ್ತಿ | 20,000/- | 15,000/- |
| 3 | ಉಣ್ಣೆ | 15,000/- | - |

- **ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ**

  ನೇಕಾರರ ಮಕ್ಕಳ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ / ವಿಶ್ವವಿದ್ಯಾಲಯಗಳಲ್ಲಿ ಪಿಯುಸಿ - ರೂ.2,500/-, ಪದವಿ - ರೂ.5,000/-, ಸ್ನಾತಕೋತ್ತರ ಪದವಿ - ರೂ.7,500/-, ಹಾಗೂ ಎಲ್ಲಾ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ನೇಕಾರರ ಮಕ್ಕಳಿಗೆ ರೂ.10,000/- ಗಳ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ಬಾಲಕಿಯರಿಗೆ ರೂ.500/- ಹೆಚ್ಚುವರಿಯಾಗಿ ನೀಡಲಾಗುವುದು.

| **ಕ್ರ. ಸಂ** | **ಕೋರ್ಸ್‌ನ ಹೆಸರು / ಕೋರ್ಸ್‌ನ ವಿಧಗಳು** | **ಹುಡುಗರು / ಪುರುಷರು** | **ಹುಡುಗಿಯರು / ಅನ್ಯ ಲಿಂಗದವರು** |
|---|---|---|---|
| 1 | ಪದವಿಯ ಮುಂಚೆ ಪಿ.ಯು.ಸಿ / ಐ.ಟಿ.ಐ / ಡಿಪ್ಲೋಮಾ | ರೂ.2,500/- | ರೂ.3,000/- |
| 2 | ಎಲ್ಲಾ ಬಿ.ಎ/ಬಿ.ಎಸ್.ಸಿ/ ಬಿ.ಕಾಂಇತ್ಯಾದಿ, ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ಮತ್ತುವೃತ್ತಿಪರಕೋರ್ಸ್‌ಗಳನ್ನು ಹೊರತುಪಡಿಸಿ | ರೂ.5,000/- | ರೂ.5,500/- |
| 3 | ಎಲ್.ಎಲ್.ಬಿ/ಪ್ಯಾರಾಮೆಡಿಕಲ್/ ಬಿ.ಫಾರ್ಮ್/ನರ್ಸಿಂಗ್ ಇತ್ಯಾದಿವೃತ್ತಿಪರಕೋರ್ಸ್‌ಗಳು | ರೂ.7,500/- | ರೂ.8,000/- |
| 4 | ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ಮತ್ತುಎಲ್ಲಾಸ್ನಾತಕೋತ್ತರ ಕೋರ್ಸ್‌ಗಳು | ರೂ.10,000/- | ರೂ.11,000/- |

- **ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ: (PMJJBY)**
  ಕೇಂದ್ರ ಸರ್ಕಾರದ PMJJBY ವಿಮಾ ಯೋಜನೆಯಡಿ ನೋಂದಾಯಿತ ಕೈಮಗ್ಗ ನೇಕಾರರಿಗೆ ರಾಜ್ಯ ಪಾಲಿನ ವಾರ್ಷಿಕ ಪ್ರಿಮಿಯಮ್ ವಂತಿಕೆ ಪ್ರತಿ ಫಲಾನುಭವಿಗಳಿಗೆ ರೂ.238/- ಗಳನ್ನು ರಾಜ್ಯ ಸರ್ಕಾರದಿಂದ ಮರುಪಾವತಿ ಮಾಡಲಾಗುವುದು ಹಾಗೂ ಕೈಮಗ್ಗ ನೇಕಾರರು ಅಪಘಾತ / ಸ್ವಾಭಾವಿಕವಾಗಿ ಮರಣ ಹೊಂದಿದ್ದಲ್ಲಿ ರೂ.2.00 ಲಕ್ಷಗಳ ವಿಮಾ ಪರಿಹಾರವನ್ನು ನಾಮಿನಿದಾರರಿಗೆ ಪಾವತಿಸಲಾಗುವುದು.

- **ನೇಕಾರರ ಸಮ್ಮಾನ್ ಯೋಜನೆ:-**

**(a) ಕೈಮಗ್ಗ ನೇಕಾರರಿಗೆ:-**

- ➢ ಕೈಮಗ್ಗ ನೇಕಾರರ ಚಟುವಟಿಕೆಗಳ ಪಾರಂಪರಿಕ ಕಲೆ ಮತ್ತು ಅವರ ಶ್ರಮವನ್ನು ಪರಿಗಣಿಸಿ ಹಾಗೂ ಕೋವಿಡ್-19 ಮಹಾಮಾರಿ ಮತ್ತು ಆರ್ಥಿಕ ಹಿನ್ನೆಡೆಯಿಂದ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ 2020-21 ನೇ ಸಾಲಿನಿಂದ ಅನ್ವಯವಾಗುವಂತೆ, ಸರ್ಕಾರ ಆದೇಶ ಸಂಖ್ಯೆ; ವಾಕೈ 47 JAKY 2020, ಬೆಂಗಳೂರು, ದಿನಾಂಕ: 16-05-2020 ರಲ್ಲಿ "**ನೇಕಾರರ ಸಮ್ಮಾನ್**" ಯೋಜನೆಯನ್ನು ಘೋಷಿಸುವ ಮೂಲಕ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲು ಆದೇಶಿಸಲಾಗಿರುತ್ತದೆ.

- ➢ 2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-268 ರಲ್ಲಿ ನೋಂದಾಯಿತ ಕೈಮಗ್ಗ ನೇಕಾರರಿಗೆ "ನೇಕಾರರ ಸಮ್ಮಾನ್ ಯೋಜನೆಯಡಿಯಲ್ಲಿ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಇದನ್ನು ರೂ.5,000/- ಗಳಿಗೆ ಹೆಚ್ಚಿಸಿ, ಸರ್ಕಾರದ ಆದೇಶ ಸಂಖ್ಯೆ: CI 22 JAKY 2022, ಬೆಂಗಳೂರು, ದಿನಾಂಕ: 19-04-2022 ರಲ್ಲಿ ಆದೇಶಿಸಲಾಗಿರುತ್ತದೆ.

**(b) ವಿದ್ಯುತ್‌ಮಗ್ಗ ನೇಕಾರರಿಗೆ:-**

- ➢ ರಾಜ್ಯದಲ್ಲಿನ ವಿದ್ಯುತ್‌ಮಗ್ಗ ವಲಯದಲ್ಲಿ ನೇಕಾರನಾಗಿ ಅಥವಾ ಸ್ವಂತ ನೇಯ್ಗೆ ಕಾರ್ಮಿಕನಾಗಿ ಅಥವಾ ಮಗ್ಗ ಪೂರ್ವ ಘಟಕಗಳಲ್ಲಿ ನೇಕಾರಿಕೆಯ ಪೂರಕ ಚಟುವಟಿಕೆಗಳಾದ ಟ್ವಿಸ್ಟಿಂಗ್, ವೈಂಡಿಂಗ್, ಯಾರ್ನ್ ಡೈಯಿಂಗ್, ವಾರ್ಪಿಂಗ್, ಝರಿ ವೈಂಡಿಂಗ್ & ವಾರ್ಪಿಂಗ್, ವಾರ್ಪ್ ನಾಟಿಂಗ್, ಸೈಜಿಂಗ್ ಹಾಗೂ ಇತರೆ ವಿದ್ಯುತ್ ಮಗ್ಗ ಚಟುವಟಿಕೆಗಳಲ್ಲಿ ತೊಡಗಿರುವ ಫಲಾನುಭವಿಗಳಿಗೆ "ನೇಕಾರ ಸಮ್ಮಾನ್ ಯೋಜನೆ" ಯಡಿ ರೂ.5,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:CI/106/JAKY/2022, ಬೆಂಗಳೂರು ದಿನಾಂಕ:21.12.2022 ರಲ್ಲಿ ಆದೇಶಿಸಲಾಗಿರುತ್ತದೆ.